ಭಾಮಾಚಾರ್ಯರನ್ನಾಗಿಸಿ, ನಾಮಕರಣಕ್ಕೆ ಪಂಡಿತರ ಒಪ್ಪಿಗೆಯನ್ನೂ ಪಡೆದಳು.

"ಭಾಮಾಚಾರ್ಯರೆ, ತಿಂಡಿಗೆ ಬನ್ನಿ" ಎಂದು ಕರೆದರೆ ಮೊದಲೆರಡು ದಿನ ಎತ್ತಲೋ ನೋಡುತ್ತಿದ್ದ ನಮ್ಮ ಬಾಲವಿಲ್ಲದ ಮಂಗಕ್ಕೆ ಮೂರನೆಯ ದಿನವೇ ಅದು ತನ್ನ ಹೆಸರೆಂದು ಗೊತ್ತಾಗಿಹೋಯಿತು.

ಭಾಮಾಚಾರ್ಯರು ನಾವು ತಿಂಡಿ ತಿನ್ನುವಾಗಲೋ ಊಟ ಮಾಡುವಾಗಲೋ ಬರುತ್ತಿದ್ದರಾದರೂ, ಅವರಿಗೆ ನಮ್ಮ ಊಟ ತಿಂಡಿಯಲ್ಲಿ ಅಷ್ಟು ಆಸಕ್ತಿಯಿರಲಿಲ್ಲ. ಏನಾದರೂ ಹಣ್ಣು ತರಕಾರಿ ಕೊಟ್ಟರೆ ಖುಷಿಯಿಂದ ತಿನ್ನುತ್ತಿದ್ದರು. ಅಮ್ಮ ಅಂಗಡಿಯಿಂದ ತರುತ್ತಿದ್ದ ಅಲಸಂಡೆ, ಪಡವಲ, ಹೀರೆ ಕಾಯಿಗಳನ್ನು ನೇರವಾಗಿ ಅವರ ಕೈಗೆ ಕೊಡುವ ಬದಲು, ಮನೆಯ ಹಿಂದಿದ್ದ ದಾಸವಾಳದ ಗಿಡಕ್ಕೋ, ಪೇರಳೆ ಗಿಡಕ್ಕೋ ಹಗ್ಗಕಟ್ಟಿ ನೇತುಹಾಕುತ್ತಿದ್ದಳು. ಭಾಮಾಚಾರ್ಯರು ಬಹಳ ಖುಷಿಯಿಂದ ಗಿಡದ ಮೇಲೆ ಕುಳಿತು ಇವುಗಳನ್ನೆಲ್ಲ ತಿನ್ನುತ್ತಿದ್ದರು. ಅಮ್ಮ ಅವರನ್ನು "ಕಳ್ಳ, ಕಳ್ಳ. ಹಸೀಕಳ್ಳ" ಎಂದು ಛೇಡಿಸುತ್ತಿದ್ದಳು.

ಭಾಮಾಚಾರ್ಯರು ನಿಧಾನವಾಗಿ ನಮ್ಮ ಕುಟುಂಬದ ಒಂದು ಭಾಗವೇ ಆಗಿಬಿಟ್ಟರು. ಮಕ್ಕಳೆಲ್ಲ ಊರು ಬಿಟ್ಟ ಮೇಲೆ ದನಕರುಗಳೊಂದಿಗೆ, ಈ ಬಾಲವಿಲ್ಲದ ಮಂಗವನ್ನೂ ಅಮ್ಮ ಬಹಳಷ್ಟು ಹಚ್ಚಿಕೊಂಡಿದ್ದಳು. ಅವುಗಳೊಂದಿಗೆ ಗಂಟೆಗಟ್ಟಲೆ ಮಾತನಾಡುತ್ತಿದ್ದಳು. ಅವಳು ಪೇಪರ್ ಓದುತ್ತಿದ್ದರೆ ಭಾಮಾಚಾರ್ಯರು ಅವಳ ಕಾಲಬಳಿ ಕುಳಿತು ವಾರ್ತೆಗಳನ್ನು ಕೇಳುತ್ತಿದ್ದರು. "ಏನಾಯಿತು ಗೊತ್ತಾ ಭಾಮಣ್ಣ, ರಸ್ತೆಯ ಮೇಲೆ ಹೋಗುತ್ತಿದ್ದ ಬಸ್ಸು ರಸ್ತೆಯ ಬದಿಯಿದ್ದ ಇಲೆಕ್ಟ್ರಿಕ್ ಕಂಬಕ್ಕೆ ಡಿಕ್ಕಿ ಹೊಡೆಯಿತಂತೆ. ಡ್ರೈವರ್ ಇಳಿದು ಓಡಿಹೋದನಂತೆ" ಇತ್ಯಾದಿ. "ಇಲ್ಲಿ ನೋಡು, ಪರ್ಯಾಯಕ್ಕೆ ಬಂದ ಹೊರೆ. ಬರೇ ಗುಳ್ಳದ ರಾಶಿ ನೋಡು" ಎಂದು ಪೇಪರಿನಲ್ಲಿ ಬಂದಿದ್ದ ಚಿತ್ರ ತೋರಿಸಿದರೆ, ಭಾಮಾಚಾರ್ಯರು ಹತ್ತಿರ ಹೋಗಿ ನೋಡುತ್ತಿದ್ದರು.

ನಾವು ನಿಲ್ಲು ಎಂದರೆ ಕಾಲವೇನು ನಿಲ್ಲುತ್ತದೆಯೆ?

ಲವಲವಿಕೆಯಿಂದ ಓಡಿಯಾಡುತ್ತಿದ್ದ ಅಮ್ಮ ತಟ್ಟನೆ ತೀರಿಹೋದಳು. ಆಕೆ ಇನ್ನಿಲ್ಲ ಎನ್ನುವುದನ್ನು ನಾವೇನು, ಹಟ್ಟಿಯಲ್ಲಿರುವ ದನಕರುಗಳೂ ನಂಬಲಿಲ್ಲ. ದನಕರುಗಳು ಬಾಯಾರಿಕೆಯಾದಾಗೆಲ್ಲ ಅವಳನ್ನು ಕರೆಯುತ್ತಿದ್ದವು. "ಕೈಯಲ್ಲಿ ಹಿಡಿದ ಕೆಲಸ ಮುಗಿಸಿ ಬರ್ತೇನೆ. ಅಲ್ಲಿಯತನಕ ಬಾಯಿಮುಚ್ಚಿಕೊಳ್ಳಿ" ಎಂದಾಕೆ ಅಡುಗೆ ಮನೆಯಿಂದಲೇ ಕೂಗಿದರೆ, ಆಕೆ ಹೇಳಿದ್ದು ಅರ್ಥವಾದಂತೆ ಅವು ಸುಮ್ಮನಿರುತ್ತಿದ್ದವು. ಅಡುಗೆಗೆ ತರಕಾರಿ ಕತ್ತರಿಸುವಾಗ ಒಂದೆರಡು ದೊಡ್ಡತುಂಡು ಅಡುಗೆಮನೆಯ ಕಿಟಕಿಯಲ್ಲಿಟ್ಟರೆ, ಭಾಮಾಚಾರ್ಯರು ಯಾವುದೇ ಸದ್ದಿಲ್ಲದೇ ಬಂದು ಎತ್ತಿಕೊಂಡು ಹೋಗುತ್ತಿದ್ದರು. ಇನ್ನು ಅವಳಿಲ್ಲ ಎನ್ನುವುದನ್ನು ಈ ದನಕರುಗಳಾಗಲೀ ಭಾಮಾಚಾರ್ಯರಾಗಲೀ ಒಪ್ಪಿಕೊಳ್ಳಲಿಕ್ಕೆ ತಯಾರಿರಲಿಲ್ಲ. ದನಕರುಗಳು ಮಧ್ಯಾಹ್ನವಾಗುತ್ತಲೇ ಕೂಗಿದವು. ಯಾರೋ ಕೆಲಸದವರು ಬಂದು ಅವುಗಳ ಬಾನಿಗೆ ಮುಸುರೆ ಕಲಗಚ್ಚು ಹಾಕಿಹೋದರೆ, ಅವು ಸುಮ್ಮನೆ ಕುಡಿಯುವ ಬದಲು ಅಮ್ಮನನ್ನು ಮತ್ತೆಮತ್ತೆ ಕರೆದವು. ಆ ದಿನ ಸಂಜೆಯ ತನಕ ಅವು ಕಲಗಚ್ಚು ಕುಡಿಯಲಿಲ್ಲ.

ಭಾಮಾಚಾರ್ಯರಾದರೆ, ಅಮ್ಮನ ಅಂತಿಮ ಕ್ರಿಯೆಯನ್ನೆಲ್ಲ ಹತ್ತಿರದಿಂದಲೇ ನೋಡಿದ್ದರು. ಆಕೆಯನ್ನು ಚಿತೆಗೇರಿಸಿದ್ದನ್ನೂ. ಚಿತೆಗೆ ಬೆಂಕಿ ಕೊಟ್ಟದ್ದನ್ನೂ. ಆ ಬೆಂಕಿ ಧಗಧಗಿಸಿ ಉರಿದದ್ದನ್ನೂ. ಎಷ್ಟೋ ಹೊತ್ತಿನ ತನಕ ನೋಡುತ್ತಲೇ ಕುಳಿತಿದ್ದರು. ನಾವು, ಮಕ್ಕಳು ಎದ್ದು ಮನೆಗೆ ಬಂದರೂ ಆ ಮಂಗ ಸಂಜೆಯತನಕ ಅಲ್ಲೇ ಕುಳಿತದ್ದನ್ನು ನಾವು ಮತ್ತೆಮತ್ತೆ ಹೋಗಿ ನೋಡಿ ಬಂದೆವು.

ಸಂಜೆಯಾದ ಮೇಲೆ ಭಾಮಾಚಾರ್ಯರು ಸಂಜೆಯಹೊತ್ತು ಅಮ್ಮ ಯಾವಾಗಲೂ ಕುಳಿತುಕೊಳ್ಳುತ್ತಿದ್ದ ಹೆಬ್ಬಾಗಿಲ ಜಗುಲಿಯನ್ನು ನೋಡಿಹೋದರು. ಪಡಸಾಲೆಯ ಕಿಟಕಿಯನ್ನು ಸದ್ದುಮಾಡಿ ಅಮ್ಮನನ್ನು ಕರೆದರು. ಅಡುಗೆಮನೆ ಕಿಟಕಿ ಹತ್ತಿ ಒಳಗೆಲ್ಲ ಇಣುಕಿ ನೋಡುತ್ತಿದ್ದರು. "ಅಮ್ಮ ಇನ್ನಿಲ್ಲ ಮಾರಾಯರೆ" ಎಂದು ಅಕ್ಕ ಹೇಳಿದರೆ ನಂಬದವರಂತೆ "ಮ್ಮ್... ಮ್ಮ್..." ಎಂದು ಎಂದಿನ ಹಾಗೆ ಅಮ್ಮನನ್ನು ಕರೆದರು.

"ನಾನು ಸತ್ತರೆ ನೀವು ಯಾರೂ ಅಳಬಾರದು" ಎಂದು ಯಾವಾಗಲೂ ಅಮ್ಮ ಹೇಳುತ್ತಿದ್ದಳು. ಈ ಹೊತ್ತಿನ ತನಕ ಒಂದುಹನಿ ಕಣ್ಣೀರು ಹಾಕದೇ, ತಮಾಷೆಯ ಮಾತಾಡುತ್ತ, ನಗುವವರಂತೆ ನಟಿಸುತ್ತಿದ್ದ ನಮ್ಮನ್ನು ಆ ಸಂಜೆ ಈ ಬಾಲವಿಲ್ಲದ ಮಂಗ ಹೀಗೆಲ್ಲಾ ಮಾಡಿ, ಅಳುವಂತೆ ಮಾಡಿತು.

ಮುಂದಿನ ಏಳೆಂಟು ದಿನ ಮನೆಯ ಸುತ್ತೆಲ್ಲ ಅಮ್ಮನನ್ನು ಹುಡುಕುತ್ತಿದ್ದ, ಯಾಚನಾಸ್ವರದಲ್ಲಿ ಕೂಗಿ ಕರೆಯುತ್ತಿದ್ದ ಭಾಮಾಚಾರ್ಯರಿಗೆ, ಇನ್ನು ಅಮ್ಮ ಬರುವುದಿಲ್ಲವೆಂದು ಖಚಿತವಾಯಿತೋ ಏನೋ. ಎತ್ತಲೋ ಹೋದ ಅವರನ್ನು ಮತ್ತೆಕಂಡದ್ದು ಅಮ್ಮನ ಕ್ರಿಯೆಯ ಕೊನೆಯ ದಿವಸ.

ಅಮ್ಮನ ಕ್ರಿಯೆಯ ಕೊನೆಯ ದಿವಸ ನಾವು ಪಿಂಡದ ಎಲೆಯನ್ನೆತ್ತಿ ಹೊರಗೆ ಅಂಗಳದ ಕೊನೆಯಲ್ಲಿಟ್ಟು ಕಾಗೆಗಾಗಿ ಕಾಯುತ್ತಿದ್ದೆವು. ನಮ್ಮ ಬಾಲ್ಯದ ದಿನಗಳಲ್ಲಾದರೆ ನಮ್ಮ ಮನೆಯಲ್ಲಿ ಹಪ್ಪಳ ಕರಿಯಲು ಒಲೆ ಮೇಲೆ ಎಣ್ಣೆ ಇಟ್ಟ ವಾಸನೆ ಬಂದ ಕೂಡಲೇ ಹತ್ತಿಪ್ಪತ್ತು ಕಾಗೆಗಳು ಬಂದು ಅಡುಗೆಮನೆ ಕಿಟಕಿಯ ಹೊರಗೆ ಕಾಕಾ ಎಂದು ನಮ್ಮ ಅಮ್ಮನನ್ನು ಕರೆಯುತ್ತಿದ್ದವು. ಈಚೆಗೆ ಪಡುಕೆರೆಯಲ್ಲಿ ಮೀನು ಫ್ಯಾಕ್ಟರಿ ಆದಮೇಲೆ ನಮ್ಮೂರ ಕಾಗೆಗಳೆಲ್ಲ ಅಲ್ಲಿಗೆ ವಲಸೆಹೋಗಿ ನಮ್ಮಲ್ಲಿ ಪಿಂಡ ಕೆದಕಲಿಕ್ಕೂ ಕಾಗೆಗಳಿಲ್ಲ ಎಂದು ಅಮ್ಮ ಬೇಜಾರಿನಿಂದ ಹೇಳತೊಡಗಿದ್ದಳು. ಈಗ ನೋಡಿದರೆ ಅವಳ ಕ್ರಿಯೆಯ ದಿನವೇ ಬೇರೆ ಪಿತೃಗಳು ಬೇಡ, ಕೊನೇ ಪಕ್ಷ ಅವಳಾದರೂ ಬರಲಿ ಎಂದು ಹಂಬಲಿಸಿದರೆ, ಒಂದೇ ಒಂದು ಕಾಗೆ ಕಾಣಿಸಲಿಲ್ಲ. ನಾವೆಲ್ಲ "ಕಾ ಕಾ ಕಾಕಾ" ಎಂದು ಇಲ್ಲದ ಕಾಗೆಯನ್ನು ಕರೆದಾಗ ನಮ್ಮ ತಂದೆಯವರು "ನೀವು ಹೀಗೆ ಕೂಗಿದರೆ ಊರಲ್ಲಿ ಇರುವ ಕಾಗೆಗಳೂ ಓಡಿ ಹೋದಾವು. ಒಳಗೆ ಬನ್ನಿ. ಅವಳಿಗೂ ಇನ್ನು ನಮ್ಮ ಅಡುಗೆ ಸೇರುವುದಿಲ್ಲವೇನೋ" ಎಂದರು.

ನಾವು ಒಳಗೆ ಬಂದು ಅತಿಥಿಗಳಿಗೆ ಎಲೆಹಾಕಿ ಊಟ ಬಡಿಸುವಾಗ ಅಯಾಚಿತವಾಗಿ ಪಡಸಾಲೆಯ ಕಿಟಕಿಯಿಂದ ಹೊರನೋಡಿದೆ.

ನಾಗನಕಟ್ಟೆಯ ಮೇಲೆ ಕುಳಿತಿದ್ದ ನಮ್ಮ ಭಾಮಾಚಾರ್ಯರು ನಿಧಾನವಾಗಿ ಇಳಿದು ಬಂದು ಪಿಂಡದ ಎಲೆಯಲ್ಲಿದ್ದ ಉದ್ದಿನವಡೆಗಳನ್ನು ಎತ್ತಿಕೊಂಡು ಹೊರಟಿದ್ದರು. "ಅಮ್ಮನ ಮಾನಸಪುತ್ರ" ಎಂದು ಹೇಳಿ ನಾನು ನಕ್ಕಾಗ, ನನ್ನ ಹಿಂದೆಯೇ ನಿಂತಿದ್ದ ನಮ್ಮ ಅಕ್ಕ, "ಅಯ್ಯೋ ಅಯ್ಯೋ ಇದೇನು ಮಾಡ್ತಾ ಇದ್ದೀರಿ ಆಚಾರ್ಯರೇ" ಎಂದು ಕೂಗಿದಳು. ಆಕೆ ಸ್ವಲ್ಪ ಜಾಸ್ತಿ ಧರ್ಮಭೀರು. ಭಾಮಾಚಾರ್ಯರಿಗೂ ಇದು ಗೊತ್ತೋ ಏನೋ. ನಾಲ್ಕು ಹೆಜ್ಜೆ ಹೋದವರು, ಹಿಂದೆ ಬಂದು ಆ ವಡೆಗಳನ್ನು ಪಿಂಡದ ಎಲೆಯಲ್ಲೇ ಬಿಟ್ಟು ಉದಾಸಚಿತ್ತರಂತೆ ಮೈ ಅಲುಗಿಸಿಕೊಂಡು ನಡೆದುಹೋದರು.

ನೀವು ನಂಬಿದರೆ ನಂಬಿ, ಬಿಟ್ಟರೆ ಬಿಡಿ. ಇದರನಂತರ ಆ ಬಾಲವಿಲ್ಲದ ಮಂಗ ಬೆಳಗೋಡಿನಲ್ಲಿ ಮತ್ತೆ ಕಾಣಿಸಲೇ ಇಲ್ಲ.




## ನೆರಳು

ನೆರಳು
ನೋಡಿ,
ಅವಳು
ಕಪ್ಪೆಂದು
ಹೇಳಿದರೆ!

**- ಬಾಲು ಪಟಗಾರ**